<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,</u>
<u>ಹೊಸದುರ್ಗ</u>

ಓ.ಎಸ್.1/2018
ಪಿ.ಡಬ್ಲೂ.02

ದಿನಾಂಕ **17.12.2021** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀ ಸವಾಲು: ಶ್ರೀ.ಎಸ್?ಜಿ, ವಕೀಲರಿಂದ **1, 6** ಮತ್ತು **9** ನೇ ಪ್ರತಿವಾದಿಗಳ ಪರವಾಗಿ:</u>

1 ನೇ ವಾದಿ 1 ನೇ ಪ್ರತಿವಾದಿಯ ವಿರುದ್ಧ ಹಾಕಿರುತ್ತಾರೆ. ಪಿತ್ರಾರ್ಜಿತ ಆಸ್ತಿ ಮತ್ತು ಸೈಟ್ ನ ವಿಚಾರವಾಗಿ ದಾವೆಯನ್ನು ಹಾಕಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. 1 ನೇ ವಾದಿ ಭಾಗ ಬೇಕೆಂದು ಕೇಳಿರುತ್ತಾರೆ. ತಂದೆಯ ಪರವಾಗಿ 2 ನೇ ವಾದಿ ದಾವೆಯನ್ನು ನಡೆಸುತ್ತಿರುತ್ತಾನೆ. 1 ನೇ ವಾದಿ 2 ನೇ ವಾದಿಗೆ ದಾವೆ ನಡೆಸಲು ಜಿ ಪಿ ಎ ನ್ನು ಬರೆದು ಕೊಟ್ಟಿರುತ್ತಾರೆ. ಸದರಿ ಜಿ ಪಿ ಎ ಯನ್ನು ನಾನು ನೋಡಿರುತ್ತೇನೆ.

4 ನೇ 1 ಭಾಗ ಕೇಳಿರುತ್ತಾರೆ. 11 ಎಕರೆ 18 ಗುಂಟೆಯಲ್ಲಿ 4 ನೇ 1 ಭಾಗ ಕೇಳಿರುತ್ತಾರೆ. ವಾದಿಗಳು ಹೇಳಿರುವ ಕಾರಣ ಈ ವಿಚಾರ ಗೊತ್ತಾಗಿರುತ್ತದೆ. ವಾದಿಗಳು ಯಾವ ಯಾವ ದಾಖಲೆಗಳನ್ನು ಮಾಡಿಕೊಂಡಿರುತ್ತಾರೆ ಎಂಬ ವಿಚಾರ ಗೊತ್ತಿದೆ ಎಂದು ಪ್ರಶ್ನಿಸಲಾಗಿ ಸಾಕ್ಷಿ ಯಾವುದೆ ದಾಖಲೆಗಳನ್ನು ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು ನಾವು ಸಂಬಂಧಿಕರಾಗಿರುವುದಿಲ್ಲ.

ಸ್ವತ್ತುಗಳ ವಿಚಾರವಾಗಿ ಯಾವುದೆ ಪಂಚಾಯ್ತಿ ಆಗಿರುವುದಿಲ್ಲ. 1992 ರಲ್ಲಿ ಪಂಚಾಯ್ತಿ ಚುನಾವಣೆಗೆ ನಾನು ಮತ್ತು 1 ನೇ ಪ್ರತಿವಾದಿ ಸ್ಪರ್ಧಿಸಿದ್ದೆವು ಎಂದರೆ ಸರಿ. ನಾನು ಚುನಾವೆಯಲ್ಲಿ ಸೋತು ರಾಮಣ್ಣ ಎನ್ನುವವರನ್ನು ಗೆಲ್ಲಿಸಿದ್ದೆ ಎಂದರೆ ಸರಿಯಲ್ಲ. 1992 ರಿಂದಲೂ 1 ನೇ ಪ್ರತಿವಾದಿಯ ವಿರುದ್ಧ ದ್ವೇಷ ಇಟ್ಟು ಕೊಂಡು ಒಂದಲ್ಲಾ ಒಂದು ಕೇಸು ಹಾಕಿಸಿ ಸಾಕ್ಷಿ ಮಾಡುತ್ತಿದ್ದೇನೆಂದರೆ ಸರಿಯಲ್ಲ .



2009-10 ರಲ್ಲಿ ನಾನು, 8 ನೇ ಪ್ರತಿವಾದಿ ಮತ್ತು ರಾಮಚಂದ್ರಪ್ಪ ಎಲ್ಲಾರು ಸೇರಿ ಒಂದು ಜಮೀನಿನ ವ್ಯವಹಾರ ಮಾಡಿದ್ದೆವು ಎಂದರೆ ಸರಿ. 8 ನೇ ಪ್ರತಿವಾದಿಮತ್ತು ರಾಮಚಂದ್ರಪ್ಪ

ಜಮೀನಿಗೆ ಬಂಡವಾಳ ಹಾಕಿದ್ದು, ಅವರಿಬ್ಬರಿಗೆ ಗೊತ್ತಿಲ್ಲದ ಹಾಗೆ ಭದ್ರ ಚಾಲನ್ ರವರಿಗೆ ಜಮೀನನ್ನು ಮಾರಾಟ ಮಾಡಿದ್ದೆ ಎಂದರೆ ಸರಿಯಲ್ಲ. ಈ ಕಾರಣದಿಂದ 8 ನೇ ಪ್ರತಿವಾದಿಗೆ ಆಗಲಿಂದಲೂ ದ್ವೇಷ ಇದ್ದು, ಈ ಕಾರಣ ಅವರ ವಿರುದ್ದ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

1962-63 ರಲ್ಲಿ 20 ಗುಂಟೆ ಜಮೀನಿನ ಅಲಿಗೇಷನ್ ಆಗಿರುತ್ತದೆ. ಸದರಿ ಅಲಿಗೇಷನ್ ನ ದಾಖಲಾತಿಗಳನ್ನು ನೋಡಿರುವುದಿಲ್ಲ. ಯಾರ ಹೆಸರಿಗೆ ಅಲಿಗೇಷನ್ ಆಗಿರುತ್ತದೆಂದು ದಾಖಲಾತಿಗಳನ್ನು ನೋಡಿರುವುದಿಲ್ಲ. 1 ನೇ ಪ್ರತಿವಾದಿ ತಮ್ಮ ಹೆಸರಿಗೆ ಖಾತೆಯನ್ನು 1950-51 ರಲ್ಲಿ ಮಾಡಿಸಿಕೊಂಡಿರುತ್ತಾರೆ. 1 ನೇ ಪ್ರತಿವಾದಿಯ ಹೇಸರಿಗೆ ಖಾತೆಯಾದ ಬಗಗೆ ಯಾವ ದಾಖಲಾತಿಗಳನ್ನು ನೋಡಿರುತ್ತೀರ ಎಂದು ಪ್ರಶ್ನಿಸಲಾಗಿ, ಸಾಕ್ಷಿ ಪಹಣಿ, ಮುಟೇಷನ್ ಮತ್ತು ಫಾರಂ 5 ಮತ್ತು 6 ನೋಡಿರುತ್ತೇನೆಂದು ನುಡಿಯುತ್ತಾರೆ. 1951 ಇಸವಿಯ ಫಾರಂ ನಂ. ,5 ಮತ್ತು 6 ನ್ನು ನೋಡಿರುತ್ತೇನೆ. ಸದರಿ ಫಾರಂ ನಂಬರ್ 5 ಮತ್ತು 6 ಮಲ್ಲಜ್ಜನ ಹೆಸರಿನಲ್ಲಿತ್ತು.

2 ನೇ ವಾದಿ ಕಡೆಯಿಂದ 7-8 ವರ್ಷಗಳ ಹಿಂದೆ ಸದರಿ ದಾಖಲಾತಿಗಳನ್ನು ನೋಡಿರುತ್ತೇನೆ. ಮುಟೇಷನ್ ನಂಬರ್ ಗೊತ್ತಿಲ್ಲ. 1965-70 ನೇ ಇಸವಿಯ 1982-85 ಇಸವಿಯ ಪಹಣಿಯನ್ನು ನೋಡಿರುತ್ತೇನೆ. 2 ನೇ ವಾದಿ ಸದರಿ ದಾಖಲಾತಿಗಳನ್ನು 7-8 ವರ್ಷಗಳ ಹಿಂದೆ ವಿಲೇಜ್ ಅಕೌಂಟ್ ನಿಂದ ತೆಗೆದುಕೊಂಡಾಗ ನೋಡಿರುತ್ತೇನೆ.



ವಾದಿ ಮತ್ತು ಪ್ರತಿವಾದಿಗಳು ಒಂದೆ ಮನೆಯಲ್ಲಿ ವಾಸವಾಗಿರುವುದಿಲ್ಲ. ದಾವಾ ಸ್ವತ್ತುಗಳ ದಾಖಲಾತಿಗಳು ಎಲ್ಲಾರ ಹೆಸರಿನಲ್ಲಿ ಇರುತ್ತವೆ. ಎಲ್ಲಾರ ಹೆಸರಿನಲ್ಲಿರುವ ಜಮೀನಿನ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

1930 ನೇ ಇಸವಿಯಲ್ಲಿಯೆ ರುದ್ರಪ್ಪನ ಮಕ್ಕಳು ಸ್ವತ್ತುಗಳನ್ನು ಪಾಲುಮಾಡಿಕೊಂಡು

ಅನುಭವಿಸಿಕೊಂಡು ಬಂದಿರುತ್ತಾರೆಂದು ಸೂಚಿಸಲಾಗಿ ಸಾಕ್ಷಿ ಜಮೀನಿನ ಭಾಗ ಆಗಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೇಸಿನ ವಿಚಾರ ಗೊತ್ತಿಲ್ಲದೆ ಇದ್ದರೂ ಪ್ರತಿವಾದಿಗ ವಿರುದ್ಧ ದ್ವೇಷ ಇರುವ ಕಾರಣ ಸುಳ್ಳು ಪ್ರಮಾ ಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಇತರೆ ಪ್ರತಿವಾದಿಗು ಗೈರು ಹಾಜರು , ಏಕ ಪಕ್ಷೀಯ , ಪಾಟೀ ಸವಾಲುಇ ಲ್ಲ ಎಂದು
ಪರಿಗಣಿಸಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.